# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ವಾರ್ಡ್ 93, ವಸಂತನಗರ
## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ:21-08-2021 ರಂದು 1ನೇ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ತಹಶಿಲ್ದಾರ್ (ಚುನಾವಣೆ) ಬಿಬಿಎಂಪಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ಹಾಗೂ ಮಾನ್ಯ ನೋಡೆಲ್ ಅಧಿಕಾರಿಗಳು ವಿ.ಸಿ ಮುಖಾಂತರ ಸಭೆಯನ್ನು ನಡೆಸಿಕೊಟ್ಟರು ಹಾಗೂ ಸಮಿತಿಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರುಗಳು,

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೋಬೆಲ್ ಸಂಖ್ಯೆ |
|---|---|---|---|
| 1 | ಶ್ರೀ. ಧರ್ಮರಾಜ್ ಜಿ ನಾಯಕ್ (ಪ್ರಭಾರ) | ನೋಡಲ್ ಆಧಿಕಾರಿಗಳು | |
| 2 | ಶ್ರೀ. ರಾಜ್ ದುಗ್ಗಾರ್ | ಸಮಿತಿ ಸದಸ್ಯರು | |
| 3 | ಶ್ರೀಮತಿ. ಚಿತ್ರಾ ವೆಂಕಟೇಶ್ | ಸದಸ್ಯರು | |
| 4 | ಶ್ರೀ. ಅರವಿಂದ | ಸದಸ್ಯರು | |
| 5 | ಶ್ರೀ,ಲಕ್ಷ್ಮಣ (ಲಚ್ಚಿ) | ಸದಸ್ಯರು | |
| 6 | ಶ್ರೀ.ಕೆ.ಜೆ.ಸಿ. ಕುಮಾರ್ | ಸದಸ್ಯರು | |
| 7 | ಶ್ರೀಮತಿ.ಪ್ರಿಯಾಚೆಟ್ಟಿ | ಸದಸ್ಯರು | |
| 8 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು | |
| 9 | ಶ್ರೀ. ಮಹಮದ್ ಜಾವೇದ್ | ಸಹಾಯಕ ಕಾರ್ಯಪಾಲಕ ಅಭಿಯಂತರರು | |
| 10 | ಶ್ರೀಮತಿ ಪುಷ್ಪಾವತಿ | ಕಂದಾಯ ನಿರೀಕ್ಷಕರು | |
| 11 | ಶ್ರೀ.ರೇಣುಕಾಂಬ | ಹಿರಿಯ ಆರೋಗ್ಯ ನಿರೀಕ್ಷಕರು | |
| 12 | ಶ್ರೀ.ಜಯರಾಜು | ಕೆಲಸ ಪರಿವೀಕ್ಷಕರು | |
| 13 | ಶ್ರೀ.ಮೂರ್ತಿ | ಕಂದಾಯ ವಸೂಲಿಗಾರರು | |
| 14 | ಶ್ರೀ. ದುರ್ಗಾಪ್ರಸಾದ್ | ಸಹಾಯಕ ಅಭಿಯಂತರರು ವಿದ್ಯುತ್ ಪೂರ್ವ ವಿಭಾಗ | |

**ದಿನಾಂಕ:21–08–2021 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗೆಳು**

1) ಶ್ರೀ.ಧರ್ಮರಾಜ್.ಜಿ.ನಾಯಕ್ ಸಹಾಯಕ ಅಭಿಯಂತರರು ಸಮಿತಿ ಸಭೆಯ ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಗೆ ಮಂಡಿಸಿದರು.

2) ದಿನಾಂಕ:07–08–2021 ರ ಸಭೆಯ ನಡಾವಳಿಗಳು ಹಾಗೂ ತೆಗೆದುಕೊಂಡು ಕ್ರಮಗಳ ಬಗ್ಗೆ ಸಭೆಯಲ್ಲಿ ವಿವರಿಸಲಾಯಿತು. ಹಾಗೂ ಇಂದಿನ ಸಭೆಯಲ್ಲಿ ಚರ್ಚಿಸುವ ಸಂಬಂಧ ಮಾನ್ಯ ಸದಸ್ಯರುಗಳಲ್ಲಿ ವಿನಂತಿಸಲಾಯಿತು.

3) ಸಮಿತಿ ಸದಸ್ಯರಾದ ಶ್ರೀ.ಕೆ.ಜೆ.ಸಿ.ಕುಮಾರ್ ಮಾತನಾಡಿ ಕೆ.ಪಿ ಪಾರ್ಕ್‌ನಲ್ಲಿ ಹೊಸದಾಗಿ 3 ಎಲ್.ಇ.ಡಿ ಲೈಟ್‌ಗಳ ವ್ಯವಸ್ಥೆ ಮಾಡಲು ಸೂಚಿಸಿದ ಮೇರೆಗೆ ಪಾರ್ಕ್‌ಗಳ ನಿರ್ವಹಣೆಯನ್ನು ತೋಟಗಾರಿಕೆ ಇಲಾಖೆಯವರಿಗೆ ಒಳಪಡುವುದರಿಂದ ತೋಟಗಾರಿ ಅಧೀಕ್ಷಕರ ಗಮನಕ್ಕೆ ತರುವುದಾಗಿ ಬೀದಿ ದೀಪಗಳ ವಿಭಾಗದ ಸಹಾಯಕ ಅಭಿಯಂತರಾದ ಶ್ರೀ.ದುರ್ಗಾ ಪ್ರಸಾದ್ ರವರು ತಿಳಿಸಿದರು. ಮತ್ತು ಈಗಾಗಲೇ ಪೈಲೆಟ್ ಪ್ರೋಜೆಕ್ಟ್‌ನಲ್ಲಿ ಅಳವಡಿಸಿರುವ ಬೀದಿ ದೀಪಗಳ ಸಾಮರ್ಥ್ಯಗಳನ್ನು ಹೆಚ್ಚಿಸಲು ತಿಳಿಸಿದರು.

4) ಸಮಿತಿ ಸದಸ್ಯರಾದ ಶ್ರೀಮತಿ.ಚಿತ್ರಾ ವೆಂಕಟೇಶ ಮಾತನಾಡಿ ಪುಟ್‌ಬಾತ್‌ನಲ್ಲಿರುವ ಗಾಡಿಗಳನ್ನು ತೆರವುಗೊಳಿಸಲು ಸೂಚಿಸಿದರು ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀಮತಿ.ರೇಣುಕಾಂಬ ರವರು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ವಸಂತನಗರ 6ನೇ ಅಡ್ಡರಸ್ತೆ ಮತ್ತು 2ನೇ ಮುಖ್ಯರಸ್ತೆಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದರು.

5) ಸಮಿತಿ ಸದಸ್ಯರಾದ ಶ್ರೀಮತಿ. ಪ್ರಿಯಾಚೆಟ್ಟಿ ರವರು ಮಾತನಾಡಿ ಈಗಾಗಲೇ ಸಮಿತಿಯ ವಾಟ್ಸಪ್ ಗ್ರೂಪ್‌ನಲ್ಲಿ 18 ಅಂಶಗಳ ಪಟ್ಟಿಯನ್ನು ನೀಡಿದ್ದು, ಅದರಲ್ಲಿ ಕನಿಷ್ಠ 6 ರಿಂದ 7 ಅಂಶಗಳನ್ನು ಕೂಡಲೇ ಪರಿಗಣಿಸುವಂತೆ ಈ ಕೆಳಕಂಡಂತೆ ವಿವರಿಸಿದರು.

(i) ಯಾವುದೇ ಕಾಮಗಾರಿ ಪ್ರಾರಂಭಿಸುವ ಪೂರ್ವದಲ್ಲಿ ವಾರ್ಡ್ ಸಮಿತಿಯ ಗಮನಕ್ಕೆ ತರುವುದು.

(ii) ನಗರ ಸೌಂದರ್ಯವನ್ನು ಹಾಳು ಮಾಡುತ್ತಿರುವ ಹೋಲ್ಡಿಂಗ್ಸ್‌ಗಳನ್ನು ತೆರವುಗೊಳಿಸಲು ಸಹಾಯಕ ಕಂದಾಯ ಅಧಿಕಾರಿಗಳು (ಜಾಹಿರಾತು) ರವರಿಗೆ ಸೂಚಿಸುವುದು.

(iii) ಮರಗಳನ್ನು ಕತ್ತರಿಸುವಾಗ ವಾರ್ಡ್ ಸಮಿತಿಯ ಗಮನಕ್ಕೆ ತರುವುದು.

(iv) ರಸ್ತೆಯಲ್ಲಿನ ಸಣ್ಣ ಮತ್ತು ಅತಿ ಸಣ್ಣ ಕಲ್ಲುಗಳನ್ನು ಸುಚಿಗೊಳಿಸುವುದು.

(v) ಜೈನ್ ಮಂದಿರ ಹತ್ತಿರವಿರುವ ಇ- ಶೌಚಾಲಯವನ್ನು ಕೂಡಲೇ ಪ್ರಾರಂಭಿಸಲು ಕ್ರಮಕೈಗೊಳ್ಳುವುದು.

(vi) ವಾರ್ಡ್ ಸಂಖ್ಯೆ:93 ನ್ನು ಹೇರಿಟೇಜ್ ಪೋಕಸ್ಸ್ ಅಡಿಯಲ್ಲಿ ಮಾದರಿ ವಾರ್ಡ್‌ನ್ನಾಗಿ ಮಾಡಲು ಅರಮನೆ ರಸ್ತೆ, ಅಂಚೆ ಕಛೇರಿ ರಸ್ತೆ, ತಾಜ್ ವೆಸ್ಟ್ ಎಂಡ್, ಮಿಲ್ಲರ್ ರಸ್ತೆ ಮತ್ತು ಕಾರ್ಲಟನ್ ಹೌಸ್ ರಸ್ತೆಗಳಿಗೆ ಹೆಚ್ಚಿನ ಅಧ್ಯತೆ ನೀಡಲು ಸೂಚಿಸಿದರು.

–3–

6) ಸಮಿತಿ ಸದಸ್ಯರಾದ ಶ್ರೀ ರಾಜ್‌ದುಗ್ಗರ್ ರವರು ಮಾತನಾಡಿ ಈ ಹಿಂದೆ ನೀಡಿರುವ 42 ದೂರುಗಳಿಗೆ ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಂಡಿರುವುದಿಲ್ಲವಾದ್ದರಿಂದ ವಾರ್ಡ್ ಇಂಜಿನಿಯರ್ ಮತ್ತು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರೊಂದಿಗೆ ವಾರ್ಡ್ ಪರಿವಿಕ್ಷಣೆಗೆ 2.30 ಗಂಟೆಗೆ ಸಮಯ ನಿಗಧಿ ಪಡಿಸಿದರು ಅದರಂತೆ ಶ್ರೀಮತಿ. ಚಿತ್ರಾ ವೆಂಕಟೇಶ ಮತ್ತು ಶ್ರೀ.ಕೆ.ಜೆ.ಸಿ ಕುಮಾರ್ ರವರೊಂದಿಗೆ ಕುಮಾರ ಪಾರ್ಕ್‌ನ ಸ್ಥಳ ಪರಿವೀಕ್ಷಣೆಗೆ ದಿನಾಂಕ:23-8-2021 ರ ಬೆಳಿಗ್ಗೆ 10.00 ಗಂಟೆಗೆ ಕಾಲಾವಶ ನೀಡಲಾಯಿತು.

7) ಸಭೆಯಲ್ಲಿ ಮಾನ್ಯ ನೋಡಲ್ ಅಧಿಕಾರಿಗಳು ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮಕೈಗೊಳ್ಳಲು ಆದೇಶಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು

| | |
|---|---|
| ಮಾನ್ಯ ನೋಡಲ್ ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |
| ವಾರ್ಡ್-93, ವಸಂತನಗರ | ವಾರ್ಡ್-93, ವಸಂತನಗರ |
| ಬಿ.ಬಿ.ಎಂ.ಪಿ | ಬಿ.ಬಿ.ಎಂ.ಪಿ |